ಒ ಎಸ್ 97/2019 ಪಿ.ಡಬ್ಲ್ಯೂ 1

ಇಂದು ದಿಃ 17.10.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ದಾವಾ ಎ ಶೆಡ್ಯೂಲ್ ಸ್ವತ್ತಿನ ಭಾಗವಾಗಿರುವ ಸರ್ವೆ ನಂ. 211/1ಎ8 ವಿಸ್ತೀರ್ಣ 8 ಗುಂಟೆ 4 ಆಣೆಗೆ ಚೆಕ್ಕುಬಂಧಿ ಕೊಟ್ಟಿಲ್ಲ. ಅದೇ ರೀತಿ ಸರ್ವೆ ನಂ. 211/1ಎ8 ವಿಸ್ತೀರ್ಣ 8 ಗುಂಟೆ 4 ಆಣೆ ಆಸ್ತಿಯಲ್ಲಿ ನಾವು ಮಾಲೀಕರು ಎಂದು ಪರಿಹಾರ ಕೇಳಿಲ್ಲ ಎಂದರೆ ಸರಿಯಲ್ಲ. ಮರಿನಂಜೇಗೌಡರ ಭಾಗಕ್ಕೆ ಬಂದ 22 ಗುಂಟೆ ಜಮೀನನ್ನು ನಮಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಆ 22 ಗುಂಟೆ ಜಮೀನಿನಲ್ಲಿ ನಾವು ಸ್ವಾಧೀನ ಇದ್ದೇವೆ. ಪೂರ್ವದ ಕಡೆ ಉಳಿಕೆ ಜಮೀನಿನಲ್ಲಿ ಮರಿನಂಜೇಗೌಡರ ಹೆಂಡತಿ ಮತ್ತು ಮಕ್ಕಳು ವಾಸ ಇದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ. 211/1ಎ ಒಟ್ಟು 2 ಎಕರೆ 31 ಗುಂಟೆ ಜಮೀನು ಎಂದರೆ ಸರಿ. 2 ಎಕರೆ 31 ಗುಂಟೆ ಜಮೀನಿನಲ್ಲಿ ನಮಗೆ 22 ಗುಂಟೆ ಜಮೀನು ಕೊಟ್ಟಿದ್ದಾರೆ ಎಂದರೆ ಸರಿ. ಉಳಿಕೆ 28 ಗುಂಟೆ ಜಮೀನು ದೊಡ್ಡಬಸವೇಗೌಡರ ಹೆಸರಿನಲ್ಲಿ ಮುಂದುವರೆದಿದೆ ಎಂದರೆ ಸರಿಯಲ್ಲ. 28 ಗುಂಟೆ ಜಮೀನಿಗೆ ದೊಡ್ಡಬಸವೇಗೌಡರ ಹೆಸರು ಆರ್ ಟಿ ಸಿ ಯಲ್ಲಿ ಬರುತ್ತಿಲ್ಲ. ಸರ್ವೆ ನಂ. 211/1ಎ ಯಲ್ಲಿ ಎಲ್ಲರ ಹೆಸರು ಬರುತ್ತಿತ್ತು. ನಂತರ ಅದು ಪೋಡಾಗಿ ಸರ್ವೆ ನಂ. 211/1ಎ4 ಎಂದು ಪೋಡಾಗಿ ಅದರಲ್ಲಿ ನಾವು ಸ್ವಾಧೀನ ಇದ್ದೆವು. ನಂತರ ಸರ್ವೆ ನಂ. 211 ಮರು ಪೋಡಾಗಿ ಸರ್ವೆ ನಂ. 211/1ಎ3 ಎಂದು ಬದಲಾವಣೆಯಾಗಿ 28 ಗುಂಟೆ ದೊಡ್ಡಬಸವೇಗೌಡರ ಹೆಸರಿಗೆ ಬರುತ್ತಿದೆ ಆದರೆ ಅಲ್ಲಿ ಜಾಗ ಇಲ್ಲ. ಸರ್ವೆ ನಂ. 211/1ಎ ಅನ್ನು ಸಂಪೂರ್ಣ ಸರ್ವೆ ಮಾಡಿಸಿದ್ದೇವೆ. ಅಲ್ಲಿ ಕಾಲುವೆ ಜಮೀನು ಸೇರಿ 2 ಎಕರೆ 31 ಗುಂಟೆ ಬರುತ್ತಿದೆ. 12 ಗುಂಟೆ ಜಮೀನು ಕಾಲುವೆಗೆ ಹೋಗಿದೆ. ಸಂಪೂರ್ಣ ಆಸ್ತಿಯನ್ನು ವಿಭಾಗ ಮಾಡಿ ಸ್ವಲ್ಪ ಆಸ್ತಿ ಕಾಲುವೆಗೆ ಹೋಗಿದೆ ಎಂಬ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೇನೆ.

ದಾವಾ ಸ್ವತ್ತಿನ ಪೂರ್ವದ ಕಡೆಗೆ ಬಸವೇಗೌಡರ ಸ್ವತ್ತಾದ ಸರ್ವೆ ನಂ. 211/1ಎ3 ಇದೆ ಎಂದರೆ ಸರಿ. ಪಶ್ಚಿಮಕ್ಕೆ ನಾಲೆ, ಉತ್ತರಕ್ಕೆ ರಸ್ತೆ , ದಕ್ಷಿಣಕ್ಕೆ ರಾಜೇಗೌಡರ ಜಮೀನು ಇದೆ ಮತ್ತು ಆ ಸ್ವತ್ತಿನ ಒಳಗಡೆ ಬರುವ 22 ಗುಂಟೆಯಲ್ಲಿ ನಾವು ಸ್ವಾಧೀನ ಇದ್ದೇವೆ ಎಂದರೆ ಸರಿ. ನೊಂದಾಯಿತ ವಿಭಾಗ ಪತ್ರದ ಪೂರ್ವದಲ್ಲಿ ದೊಡ್ಡಬಸವೇಗೌಡರು ಸರ್ವೆಗೆ ಅರ್ಜಿ ಸಲ್ಲಿಸಿ ಸರ್ವೆ ಆದ ನಂತರ ವಿಭಾಗ ಆಗಿದೆ ಎಂದರೆ ನಕ್ಷೆ ತಪ್ಪಾಗಿರುತ್ತದೆ ಆದರೆ ವಿಭಾಗವಾಗಿರುತ್ತದೆ ಎನ್ನುತ್ತಾರೆ. ಆ ವಿಭಾಗದಂತೆ 1ನೇ ಪ್ರತಿವಾದಿಗೆ ನಮ್ಮ ದಾವಾ ಸ್ವತ್ತಿನ ಪೂರ್ವಕ್ಕೆ 8 ¼ ಗುಂಟೆ ಜಮೀನು ಬಂತು ಎಂದರೆ ಸರಿಯಲ್ಲ. ಪಶ್ಚಿಮದ ಕಡೆಗೆ ಸರ್ವೆ ನಂ. 211/1ಎ 4 ಎಂದು ತೋರಿಸಿದ್ದಾರೆ ಎಂದರೆ ಸರಿ ಆದರೆ ಅಲ್ಲಿ ಜಾಗ ಇಲ್ಲ. 8 ¼ ಗುಂಟೆ ಜಮೀನು ಈಗಲೂ ಸಹ ಇದೆ ಆದರೆ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಹೆಸರಿಗೆ ಬಂದ 8 ¼ ಗುಂಟೆ ಜಮೀನನ್ನು ದಿನಾಂಕ 27.08.2013ರಂದು 8ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಆ

ಪ್ರಕಾರ ಹೂವಮ್ಮ ಸ್ವಾಧೀನ ಹೊಂದಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಂತರ ಖರೀದಿದಾರರ ಹೆಸರಿಗೆ ಖಾತೆ ಬರುತ್ತಿದೆ ಎಂದರೆ ಸರಿ ಆದರೆ ಸ್ವಾದೀನದಲ್ಲಿ ಇಲ್ಲ. ಕ್ರಯವಾದ ಲಾಗಾಯಿತಿನಿಂದ 8ನೇ ಪ್ರತಿವಾದಿ ಸ್ವಾದೀನ ಇದ್ದಾರೆ ಎಂದರೆ ಸರಿಯಲ್ಲ. ಹೂವಮ್ಮ 8ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯ ಪತ್ರದ ಚೆಕ್ಕುಬಂದಿ ಸರಿ ಇರುತ್ತದೆ ಆದರೆ ಅಲ್ಲಿ ಜಾಗ ಇಲ್ಲ. ಜಮೀನಿನ ಮೌಲ್ಯ ಈಗ ಹೆಚ್ಚಾದ ಕಾರಣ ಅದನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 8ನೇ ಪ್ರತಿವಾದಿ ಹೆಸರಿನಲ್ಲಿ ಆಗಿರುವ ಕ್ರಯ ಪತ್ರವನ್ನು ರದ್ದು ಮಾಡಿ ಎಂದು ಪರಿಹಾರ ಕೇಳದ ಕಾರಣ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 211/1ಎ4 ರ 22 ಗುಂಟೆಯಲ್ಲಿ ನಾವು ಸ್ವಾಧೀನ ಇದ್ದೇವೆ ಎಂದರೆ ಸರಿ ಹಾಗೂ ಸರ್ವೆ ನಂ. 211/1ಎ8 ರಲ್ಲಿ 8 ¼ ಗುಂಟೆ ಜಮೀನಿನಲ್ಲಿ 8 ನೇ ಪ್ರತಿವಾದಿ ಸ್ವಾಧೀನ ಇದ್ದಾರೆ ಎಂದರೆ ಸುಳ್ಳು.  2 ಎಕರೆ 31 ಗುಂಟೆ ಜಮೀನಿನಲ್ಲಿ 12 ಗುಂಟೆ ಕಾಲುವೆಗೆ ಒತ್ತುವರಿಯಾಗಿದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.  ಕ್ರಯ ಪತ್ರವಾದ ಲಾಗಾಯಿತಿನಿಂದ ನಾವು 22 ಗುಂಟೆ ಜಮೀನಿನಲ್ಲಿ ಸ್ವಾದೀನ ಇದ್ದೇವೆ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.